1	2	3	4	5	6
9.	ತುಮಕೂರು ನಗರಾಭಿವೃದ್ಧಿ ಪ್ರಾಧಿಕಾರ	2,78,85,470	2,48,50,071	2,38,32,857	30,35,399
10.	ತುಮಕೂರು ನಗರಾಭಿವೃದ್ಧಿ ಪ್ರಾಧಿಕಾರ	2,63,95,322	2,22,00,000	2,03,19,704	41,95,322
		13,96,11,977	12,43,62,309	11,97,69,351	1,52,49,668

ಅನುಬಂಧ-3

	ಇಲಾಖೆ ಹೆಸರು	ಭೂಸ್ವಾಧೀನ ವಿಸ್ತೀರ್ಣವನ್ನು ವಶಕ್ಕೆ ತೆಗೆದುಕೊಂಡಿದೆಯೇ?	ಭೂಸ್ವಾಧೀನದ ಉದ್ದೇಶ ಹಾಗೂ ವಿಸ್ತೀರ್ಣದ ವಿವರಗಳನ್ನು ಕಂದಾಯ ದಾಖಲೆಗಳಲ್ಲಿ ಸೇರಿಸಲಾಗಿದೆಯೇ?
1.	ಸಣ್ಣ ನೀರಾವರಿ ಇಲಾಖೆ	ತೆಗೆದುಕೊಂಡಿಲ್ಲ	ಇಲ್ಲ.
2.	ಬಾಪೂಜಿ ವಿದ್ಯಾಸಂಸ್ಥೆ	ತೆಗೆದುಕೊಂಡಿದೆ	ದಾಖಲಿಸಲಾಗಿದೆ
3.	ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ	ತೆಗೆದುಕೊಂಡಿದೆ	ದಾಖಲಿಸಲಾಗಿದೆ
4.	ಜಿಲ್ಲಾ ಪಂಚಾಯತ್ ಇಂಜಿನಿಯರಿಂಗ್ ವಿಭಾಗ	ತೆಗೆದುಕೊಂಡಿದೆ	ದಾಖಲಿಸಲಾಗಿದೆ
5.	ಕೆ.ಪಿ.ಟಿ.ಸಿ.ಎಲ್.	ತೆಗೆದುಕೊಂಡಿದೆ	ದಾಖಲಿಸಲಾಗಿದೆ
6.	ವಿದ್ಯಾನಿಕೇತನ ವಿದ್ಯಾಸಂಸ್ಥೆ	ತೆಗೆದುಕೊಂಡಿದೆ	ದಾಖಲಿಸಲಾಗಿದೆ
7.	ಜಲಸಂಪನ್ಮೂಲ ಇಲಾಖೆ	ತೆಗೆದುಕೊಂಡಿದೆ	ದಾಖಲೆಗಳಲ್ಲಿ ಸೇರಿಸಿರುವ ಬಗ್ಗೆ ಪರಿಶೀಲಿಸಲು ತಹಶೀಲ್ದಾರ್-ರವರಿಗೆ ಪ್ರಮಾಣಪತ್ರ ಸಲ್ಲಿಸುವಂತೆ ಕೇಳಲಾಗುವುದು.
8.	ತುಮಕೂರು ನಗರಾಭಿವೃದ್ಧಿ	ತೆಗೆದುಕೊಂಡಿದೆ.	- ಆದೇ -

ರಾಷ್ಟ್ರೀಯ ಹೆದ್ದಾರಿಗಳ ಅಗಲೀಕರಣ

939 (1448) - ಶ್ರೀ ಶಿವಣ್ಣ ಎಸ್. (ತುಮಕೂರು) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ರಾಷ್ಟ್ರೀಯ ಹೆದ್ದಾರಿ ನಿಯಮದ ರೀತ್ಯಾ ರಾಷ್ಟ್ರೀಯ ಹೆದ್ದಾರಿ 206 ಪ್ರಾರಂಭದಿಂದ 15 ಕಿಮೀ ವರೆಗೆ ಅಗಲವಾಗಿದೆಯೇ, ಇಲ್ಲವಾದಲ್ಲಿ ಇದನ್ನು ವಿಶಾಲಗೊಳಿಸುವ ಹಾಗೂ

ಇಕ್ಕಲಗಳಲ್ಲಿರುವ ಕಟ್ಟಡಗಳನ್ನು ತೆರವುಗೊಳಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ, ಇದ್ದಲ್ಲಿ ವೆಚ್ಚದ ಪರಿಮಾಣದ ಬಗ್ಗೆ ಅಂದಾಜು ತಯಾರಿಸಲಾಗಿದೆಯೇ, ಅದರ ಮೊತ್ತವೆಷ್ಟು?

ಆ. ನಗರದ ಪರಿಮಿತಿಯಲ್ಲಿ ಈ ರಸ್ತೆಯನ್ನು ವಿಭಜಿಸುವ ಪ್ರಸ್ತಾವನೆಯು ಸರ್ಕಾರದ ಮುದಿದೆಯೇ?

ಇ. ಈ ಹೆದ್ದಾರಿಯನ್ನು ತುಮಕೂರು ನಗರದ ಹೊರಗಡೆ ನಿರ್ಮಾಣ ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ?

ಶ್ರೀ ಧರ್ಮಸಿಂಗ್ (ಲೋಕೋಪಯೋಗಿ ಸಚಿವರು) :

ಅ. ರಾಷ್ಟ್ರೀಯ ಹೆದ್ದಾರಿ 206 ರ ಪ್ರಾರಂಭದಿಂದ ಕಿಮೀ 0.00 ರಿಂದ ಕಿಮೀ 15ವರೆಗೆ ಕ್ಯಾರೇಜ್ ವೇ ಹಾಗೂ ಫಾರ್ಮೇಷನ್ ಅಗಲವು ರಾಷ್ಟ್ರೀಯ ಹೆದ್ದಾರಿ ನಿಯಮದ ಅನುಗುಣವಾಗಿರುತ್ತದೆ.

ಉದ್ಭವಿಸುವುದಿಲ್ಲ.

ಆ. ಸಧ್ಯಕ್ಕೆ ಇರುವುದಿಲ್ಲ.

ಇ. ಇರುವುದಿಲ್ಲ.

ಯಲಬುರ್ಗ ತಾಲ್ಲೂಕಿನ ಜಿಲ್ಲಾ ಪ್ರಮುಖ ರಸ್ತೆಗಳನ್ನು ರಾಜ್ಯ ಹೆದ್ದಾರಿಗಳನ್ನಾಗಿ ಪರಿವರ್ತಿಸುವುದು

940 (1084) - ಶ್ರೀ ಶಿವಶರಣಪ್ಪಗೌಡ ಪಾಟೀಲ್ (ಯಲಬುರ್ಗ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ಯಲಬುರ್ಗಾ ತಾಲ್ಲೂಕಿನ ಭಾನಾಪೂರ-ಯಲಬುರ್ಗಾ ಸಂಕನೂರ ಜಿಲ್ಲಾ ಪ್ರಮುಖ ರಸ್ತೆಯನ್ನು (M.D.R.) ರಾಜ್ಯ ಹೆದ್ದಾರಿಯನ್ನಾಗಿ ಪರಿವರ್ತಿಸಲು ಸರ್ಕಾರ ಯೋಚಿಸಿದೆಯೇ;

ಆ. ಹಾಗಿದ್ದಲ್ಲಿ ಈ ಬಗ್ಗೆ ತೆಗೆದುಕೊಳ್ಳುವ ಕ್ರಮವೇನು?

ಶ್ರೀ ಧರ್ಮಸಿಂಗ್ (ಲೋಕೋಪಯೋಗಿ ಸಚಿವರು) :

ಅ. ಈ ಬಗ್ಗೆ ಸೂಕ್ತ ಸಮಯಕ್ಕೆ ಪರಿಶೀಲಿಸಲಾಗುವುದು.

ಆ. ಉದ್ಭವಿಸುವುದಿಲ್ಲ.

ಕೊಪ್ಪಳ ಜಿಲ್ಲೆಯಲ್ಲಿ ಕೇಂದ್ರ ರಸ್ತೆ ಅಭಿವೃದ್ಧಿ

941 (1088) - ಶ್ರೀ ಶಿವಶರಣಪ್ಪಗೌಡ ಪಾಟೀಲ್ (ಯಲಬುರ್ಗಾ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ಕೊಪ್ಪಳ ಜಿಲ್ಲೆಯ ಯಾವ ಯಾವ ತಾಲ್ಲೂಕಿನಲ್ಲಿ ಕೇಂದ್ರ ರಸ್ತೆಯ ನಿಧಿಯಿಂದ ತೆಗೆದುಕೊಂಡ ರಸ್ತೆ ಕಾಮಗಾರಿಗಳು ಯಾವುವು? ಮಂಜೂರಾದ ಹಣ ಎಷ್ಟು?

ಆ. ಯಲಬುರ್ಗಾ ತಾಲ್ಲೂಕಿನ ಯಾವ ರಸ್ತೆಗಳನ್ನು ಈ ಯೋಜನೆಯಲ್ಲಿ ತೆಗೆದುಕೊಳ್ಳಲು ಯೋಚಿಸಲಾಗಿದೆ?

ಶ್ರೀ ಧರ್ಮಸಿಂಗ್ (ಲೋಕೋಪಯೋಗಿ ಸಚಿವರು) :

ಅ. ಕೊಪ್ಪಳ ಜಿಲ್ಲೆಯ ಕೊಪ್ಪಳ, ಕುಷ್ಟಗಿ ಹಾಗೂ ಗಂಗಾವತಿ ತಾಲ್ಲೂಕುಗಳಲ್ಲಿ ಕೇಂದ್ರ ರಸ್ತೆಯ ನಿಧಿಯಿಂದ ಕೆಳಕಂಡ ಕಾಮಗಾರಿಗಳು ಹಾಗೂ ಅವುಗಳ ವೆಚ್ಚವನ್ನು ಈ ಕೆಳಗೆ ನೀಡಲಾಗಿರುತ್ತದೆ.